ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ – ೦೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತಾರನೆಯ ಅಧಿವೇಶನ**

**ಗುರುವಾರ, ದಿನಾಂಕ: ೧೧ನೇ ಡಿಸೆಂಬರ್, ೨೦೧೪**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

## ತೆರೆದ ಚರಂಡಿ, ಮ್ಯಾನ್‌ಹೋಲ್‌ಗಳಲ್ಲಿ ಕೊಚ್ಚಿಹೋದ ವ್ಯಕ್ತಿಗಳು

**ಶ್ರೀ ಎಂ. ಶ್ರೀನಿವಾಸ (ವಿಧಾನಸಭೆಯಿಂದ ಚುನಾಯಿತರಾದವರು) –**

೩೧ (೧೫೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ತೆರೆದ ಚರಂಡಿಗಳು, ಮ್ಯಾನ್‌ಹೋಲ್‌ಗಳಿಂದಾಗಿ ಮಳೆಗಾಲದಲ್ಲಿ ಕೊಚ್ಚಿ ಹೋದ ಮಕ್ಕಳು ಮತ್ತು ವ್ಯಕ್ತಿಗಳ ಸಂಖ್ಯೆ ಎಷ್ಟು ; ಇವರುಗಳ ಪತ್ತೆ ಕಾರ್ಯಾಚರಣೆಗಾಗಿ ವ್ಯಯಿಸಿದ ಹಣ ಎಷ್ಟು ; (ಪ್ರಕರಣವಾರು, ವರ್ಷಾವಾರು ಮಾಹಿತಿ ಒದಗಿಸುವುದು)

(ಆ) ಪದೇ ಪದೇ ಆಗುತ್ತಿರುವ ಈ ಅನಾಹುತಕ್ಕೆ ಕಾರಣವಾಗಿರುವ ಅಂಶಗಳು ಏನು ; (ವಿವರ ಒದಗಿಸುವುದು)

(ಇ) ಈ ಅನಾಹುತಗಳ ತಡೆಗೆ ಸರ್ಕಾರವು ಯಾವ ಯಾವ ದೀರ್ಘಾವಧಿ ಯೋಜನೆಗಳನ್ನು ಕೈಗೊಂಡಿದೆ ? (ವಿವರ ಒದಗಿಸುವುದು)

## ಪೊಲೀಸ್ ಕಾನ್‌ಸ್ಟೇಬಲ್‌ಗಳ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨ (೪೬೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚೆಗೆ ನಡೆದ ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆಯ ಪೂರ್ವವೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು ನಿಜವೇ ;

(ಆ) ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದ ಆರೋಪಿಯನ್ನು ಪೊಲೀಸರು ಸುಪರ್ದಿಗೆ ತೆಗೆದುಕೊಂಡು ವಿಚಾರಣೆ ನಡೆಸುತ್ತಿರುವುದು ಯಾವ ಹಂತದಲ್ಲಿದೆ ;

(ಇ) ಪರೀಕ್ಷಾ ಪೂರ್ವದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆವುಂಟಾಗುವುದರಿಂದ ಅಭ್ಯರ್ಥಿಗಳಲ್ಲಿ ಆಶಾಭಾವ ಕಮರಿ ಹೋಗುವುದಿಲ್ಲವೇ ಮತ್ತು ಮುಂದಿನ ದಿನಗಳಲ್ಲಿ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತದೆ ? (ವಿವರ ನೀಡುವುದು)

## ನೀರು ಎತ್ತುವ ಮೋಟಾರ್ ಪಂಪ್ ಕಳವು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩ (೨೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು ಮತ್ತು ಬ್ರಹ್ಮಾವರ ಪೊಲೀಸ್ ವೃತ್ತ ನಿರೀಕ್ಷಕರ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಕೊಲೆ, ಸುಲಿಗೆ, ದರೋಡೆ ಮತ್ತು ಕಳವು ಪ್ರಕರಣಗಳೆಷ್ಟು ಮತ್ತು ಯಾವುವು ; ಇವುಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು ಮತ್ತು ಪತ್ತೆ ಹಚ್ಚಲು ಬಾಕಿ ಇರುವ ಪ್ರಕರಣಗಳೆಷ್ಟು ; (ಠಾಣಾವಾರು, ಪ್ರಕರಣವಾರು, ವರ್ಷಾವಾರು ವಿವರ ನೀಡುವುದು)

(ಆ) ಕುಂದಾಪುರ ಪೊಲೀಸ್ ವೃತ್ತ ನಿರೀಕ್ಷಕರ ವ್ಯಾಪ್ತಿಯ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯ ಹಾಲಾಡಿಯ ಕೊರಗರ ಕಾಲೋನಿಯ ನೀರು ಎತ್ತುವ ಮೋಟಾರ್ ಪಂಪು ಕಳುವಾಗಿರುವುದು ನಿಜವೇ ; ನಿಜವಾಗಿದ್ದಲ್ಲಿ, ನೀರು ಎತ್ತುವ ಮೋಟಾರ್ ಪಂಪಿನ ಅಶ್ವಶಕ್ತಿ, ಮೋಟಾರ್ ಪಂಪ್ ನಂಬರ್, ಖರೀದಿಸಿದ ಸ್ಥಳ, ವಿದ್ಯುತ್ ಸಂಪರ್ಕದ ಮಾಹಿತಿ ಲಭ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಸಂಚಾರಿ ಆರಕ್ಷಕ ಠಾಣೆಗಳ ಸ್ಥಾಪನೆ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೪ (೪೬೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಮತ್ತು ಬಿಜಾಪುರ ಅವಳಿ ಜಿಲ್ಲೆಗಳಲ್ಲಿರುವ ಸಂಚಾರಿ ಆರಕ್ಷಕ ಠಾಣೆಗಳೆಷ್ಟು ; ಅವಳಿ ಜಿಲ್ಲೆಗಳಲ್ಲಿ ಎಷ್ಟು ಹೊಸ ಸಂಚಾರಿ ಆರಕ್ಷಕ ಠಾಣೆಗಳ ಸ್ಥಾಪನೆಯ ಬೇಡಿಕೆಗಳಿವೆ ; ಇದ್ದರೆ ಯಾವ ಯಾವ ನಗರಗಳಲ್ಲಿ ಸ್ಥಾಪಿಸಲಾಗುವುದು ;

(ಆ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆ ಸ್ಥಾಪನೆಯ ಪ್ರಸ್ತಾವನೆ ಇದೆಯೇ ; ಇದ್ದರೆ, ಯಾವ ಕಾಲಮಿತಿಯನ್ನು ಸ್ಥಾಪಿಸಲಾಗುವುದು ?

## ಕುಡಿಯುವ ನೀರಿಗೆ ಹಾಹಾಕಾರ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೩೫ (೪೪೭) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಜಿಲ್ಲೆಗಳ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ, ಒಳಚರಂಡಿ ಮತ್ತು ತ್ಯಾಜ್ಯ ವಿಲೇವಾರಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅದರ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಜಿಲ್ಲಾವಾರು ವಿವರ ನೀಡುವುದು)

## ಬಿ.ಡಿ.ಎ. ವೃತ್ತದಿಂದ ಮೇಖ್ರಿ ಸರ್ಕಲ್‌ವರೆಗಿನ ಬಳ್ಳಾರಿ ರಸ್ತೆ ಅಗಲೀಕರಣ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೩೬ (೧೧೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಿ.ಡಿ.ಎ. ವೃತ್ತದಿಂದ ಮೇಖ್ರಿ ಸರ್ಕಲ್‌ವರೆಗಿನ ಬಳ್ಳಾರಿ ರಸ್ತೆಯಲ್ಲಿ ಅತ್ಯಂತ ಹೆಚ್ಚಿನ ವಾಹನ ದಟ್ಟಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅದನ್ನು ಅಗಲೀಕರಣ ಮಾಡಲು ಮಹಾನಗರ ಪಾಲಿಕೆ ಯೋಜನೆ ರೂಪಿಸಿದೆಯೆ ;

(ಇ) ಈ ರಸ್ತೆಯನ್ನು ಅಗಲೀಕರಣ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

# ಸಮಾಜಘಾತುಕ ಶಕ್ತಿಗಳನ್ನು ತಡೆಗಟ್ಟಲು ಪೊಲೀಸರಿಗೆ ವಿಶೇಷ ತರಬೇತಿ

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) –**

೩೭ (೪೮೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಸಹಜ ಅಪರಾಧಗಳ, ಭಯೋತ್ಪಾದನೆ, ನಕ್ಸಲಿಸಂ ಹಾಗೂ ಕೊಲೆ ಮತ್ತು ಸುಲಿಗೆ ಅಪರಾಧ ಪ್ರಕರಣಗಳು ಸಮಾಜಘಾತುಕ ದುಷ್ಟ ಶಕ್ತಿಗಳಿಂದ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಬಗೆಯ ಅಮಾನುಷ ಕೃತ್ಯಗಳಲ್ಲಿ ತೊಡಗುವ ಅಪರಾಧಿಗಳನ್ನು ಮತ್ತು ಅಪರಾಧಗಳನ್ನು ತಡೆಗಟ್ಟುವ ಕರ್ತವ್ಯದಲ್ಲಿ ನಿರತವಾಗುವ ಪೊಲೀಸ್ ಸಿಬ್ಬಂದಿಗೆ ವಿಶೇಷವಾದ ಪರಿಣಿತಿ, ನೈಪುಣ್ಯತೆ ಮತ್ತು ಹಲವು ಬಗೆಯ ತರಬೇತಿಗಳ ಅವಶ್ಯಕತೆಯಿದೆ ಎಂಬುದನ್ನು ಸರ್ಕಾರ ಒಪ್ಪುತ್ತದೆಯೇ ;

(ಇ) ಈ ರೀತಿಯ ಅಪರಾಧಿಗಳನ್ನು ಪತ್ತೆ ಹಚ್ಚುವ ಹಾಗೂ ಕಾನೂನು ವ್ಯಾಪ್ತಿಗೆ ತರುವ ಕಾರ್ಯದಲ್ಲಿ ಭಾಗಿಯಾಗುವ ಪೊಲೀಸ್ ಸಿಬ್ಬಂದಿಗೆ ಈ ಸಂದರ್ಭಗಳನ್ನು ವ್ಯವಸ್ಥಿತವಾಗಿ ನಿಭಾಯಿಸಲು ಅವಶ್ಯವಿರುವ ಪರಿಣಿತಿ ಹೊಂದುವುದಕ್ಕಾಗಿ ಸೂಕ್ತ ತರಬೇತಿ ನೀಡಲು ಸರ್ಕಾರ ಈವರೆಗೂ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳಲಿರುವ ಕ್ರಮಗಳಾವುವು ;

(ಈ) ದೇಶದಲ್ಲಿ ಈ ವಿಚಾರಗಳಿಗೆ ಸಂಬಂಧಿಸಿದಂತೆ ಅವಶ್ಯವಿರುವ ತರಬೇತಿ ನೀಡಲು ಗಮನಹರಿಸಿದ ರಾಜ್ಯಗಳು ಯಾವುವು ; (ಮಾಹಿತಿಯಿದ್ದಲ್ಲಿ ವಿವರ ನೀಡುವುದು)

(ಉ) ಈ ಕಾರ್ಯಗಳಲ್ಲಿ ನಿರತರಾಗುವ ಸಿಬ್ಬಂದಿಗಳಿಗೆ ಇಲಾಖೆಯಲ್ಲಿ ಇಲಾಖಾ ಸಿಬ್ಬಂದಿಗಳಿಗೆ ಸಹಜವಾಗಿ ನೀಡಲಾಗುವ ಸವಲತ್ತು ಮತ್ತು ಅನುಕೂಲತೆಗಳನ್ನು ಹೊರತುಪಡಿಸಿ ಹೆಚ್ಚುವರಿ ಸವಲತ್ತು ಮತ್ತು ಅನುಕೂಲತೆ ಒದಗಿಸಿಕೊಡುವುದಲ್ಲದೇ ವಯೋಮಿತಿಯನ್ನು ಗಮನದಲ್ಲಿರಿಸಿಕೊಂಡು ಕರ್ತವ್ಯ ನಿರ್ವಹಿಸಲು ಅನುವಾಗುವಂತೆ ಪೂರಕ ಕ್ರಮಗಳನ್ನು ಜರುಗಿಸಲು ಸರ್ಕಾರ ಚಿಂತಿಸುತ್ತದೆಯೇ ? (ವಿವರಗಳನ್ನು ಒದಗಿಸುವುದು)

## ಸರ್ಕಾರಿ ವಾಹನಗಳ ಸದ್ಬಳಕೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೮ (೫೬೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಒಟ್ಟು ಸರ್ಕಾರಿ ವಾಹನಗಳ ಸಂಖ್ಯೆ ಎಷ್ಟು ; ಈ ಸರ್ಕಾರಿ ವಾಹನಗಳಲ್ಲಿ ಚಾಲನೆಯಲ್ಲಿರುವ ಒಟ್ಟು ಸರ್ಕಾರಿ ವಾಹನಗಳ ಸಂಖ್ಯೆ ಎಷ್ಟು ;

(ಆ) ವಿವಿಧ ಇಲಾಖೆಗಳಲ್ಲಿ ಖಾಸಗಿಯವರಿಂದ ಬಾಡಿಗೆಗೆ ಪಡೆದುಕೊಂಡಿರುವ ವಾಹನಗಳ ಸಂಖ್ಯೆ ಎಷ್ಟು ;

(ಇ) ಖಾಸಗಿಯವರಿಂದ ಬಾಡಿಗೆಗೆ ಪಡೆದುಕೊಂಡಿರುವ ವಾಹನಗಳಿಗೆ ಮಾಸಿಕ ತಗಲುವ ವೆಚ್ಚ ಎಷ್ಟು ; ಇಲಾಖೆಗಳಲ್ಲಿನ ಅಧಿಕಾರಿಗಳು ಒಂದಕ್ಕಿಂತ ಹೆಚ್ಚಿನ ವಾಹನವನ್ನು ಬಳಸುತ್ತಿರುವವರ ಸಂಖ್ಯೆ ಎಷ್ಟು ;

(ಈ) ಸರ್ಕಾರದ ಅಧಿಕಾರಿಗಳಿಗೆ ಅವರ ಹುದ್ದೆಗೆ ತಕ್ಕಂತೆ ಎಷ್ಟು ವಾಹನವನ್ನು ಕಾನೂನು ರೀತ್ಯಾ ಪಡೆದುಕೊಳ್ಳಬಹುದಾಗಿರುತ್ತದೆ ? (ವಿವರಗಳನ್ನು ನೀಡುವುದು)

## ಬಯೋಮೆಟ್ರಿಕ್ ಪದ್ಧತಿ ಅಳವಡಿಕೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೩೯ (೨೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಕಛೇರಿಗಳಲ್ಲಿ ಯಾವ ದಿನಾಂಕದಂದು ಬಯೋಮೆಟ್ರಿಕ್ ಪದ್ಧತಿಯನ್ನು ಜಾರಿಗೆ ತರಲಾಗಿದೆ ಮತ್ತು ಯಾವ ಯಾವ ಇಲಾಖೆಯಲ್ಲಿ ಈ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಚಿವಾಲಯದಲ್ಲಿ ೨೦೧೦ ರಿಂದ ಇಲ್ಲಿಯವರೆಗೆ ಈ ಪದ್ಧತಿಗೆ ಅನುಗುಣವಾಗಿ ನಿಗದಿತ ಸಮಯಕ್ಕೆ ಸರಿಯಾಗಿ ಹಾಜರಾದವರ ಸಂಖ್ಯೆ ಎಷ್ಟು ; ನಿಗದಿತ ಸಮಯಕ್ಕೆ ಹಾಜರಾಗದವರ ಮೇಲೆ ತೆಗೆದುಕೊಂಡ ಕ್ರಮಗಳೇನು ;

(ಇ) ತಡವಾಗಿ ಹಾಜರಾದ ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ಯಾರಿಗೆ ಇದೆ ;

(ಈ) ೨೦೧೩ರ ಮಾರ್ಚ್ ಅಂತ್ಯದವರೆಗೆ ಒಟ್ಟು ೧೫೨೦ ಜನ ಬೇರೆ ಬೇರೆ ಇಲಾಖೆಯಲ್ಲಿ ತಡವಾಗಿ ಕಛೇರಿಗೆ ಬಂದಿರುವುದು ನಿಜವೇ ; ನಿಜವಿದ್ದಲ್ಲಿ, ಅವರ ಹೆಸರು, ಇಲಾಖೆ ಮತ್ತು ಅವರ ಮೇಲೆ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಗಳ ನಿಷ್ಕ್ರಿಯತೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦ (೪೮೩) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಗಳು ನಿಷ್ಕ್ರಿಯವಾಗಿದ್ದು, ವಸತಿ ರಹಿತ ನಾಗರಿಕರು ತೊಂದರೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಉತ್ತಮ ಅಧಿಕಾರಿಗಳನ್ನು ನೇಮಕ ಮಾಡಿ, ಸದರಿ ಪ್ರಾಧಿಕಾರಗಳನ್ನು ಬಲಪಡಿಸಿ ಈ ನಗರಗಳಲ್ಲಿ ಉತ್ತಮ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುವುದೇ ;

(ಇ) ಬೆಳಗಾವಿ ಸುವರ್ಣಸೌಧ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶ್ರೇಷ್ಠ ದರ್ಜೆಯ ಯೋಜನಾಬದ್ಧ ಬಡಾವಣೆಗಳನ್ನು ರಚಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ;

(ಈ) ಈ ಪ್ರದೇಶದಲ್ಲಿ ಕಂದಾಯ ನಿವೇಶಗಳಲ್ಲಿ ಯೋಜನಾರಹಿತ ಕಟ್ಟಡಗಳ ನಿರ್ಮಾಣಗಳನ್ನು ಹತ್ತಿಕ್ಕಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ?

## ಮೆಟ್ರೋ ನೌಕರರ ವೇತನ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೪೧ (೫೭೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (BMRCL) ಆರಂಭವಾದಾಗಿನಿಂದ ಅಲ್ಲಿನ ಸಿಬ್ಬಂದಿ ವರ್ಗದವರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ (C & R) ರಚನೆಯಾಗಿದೆಯೇ ; ಹಾಗಿದ್ದಲ್ಲಿ, ಪ್ರತಿಯನ್ನು ಒದಗಿಸುವುದು ; ಆಗದಿದ್ದಲ್ಲಿ, ಯಾವ ಆಧಾರದ ಮೇಲೆ ಈವರೆಗೆ ನೇಮಕಾತಿ ವೃಂದ ಬಲ ಮತ್ತು ಮುಂಬಡ್ತಿ ನಿಯಮಗಳನ್ನು ಅಳವಡಿಸಲಾಗಿದೆ ; (ಪ್ರತಿ ಒದಗಿಸುವುದು)

(ಆ) BMRCLನ ಸಿಬ್ಬಂದಿಗಳ ಮೆರಿಟ್ ಆಧಾರಿತ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿದೆಯೇ ; (ಪ್ರತಿಯನ್ನು ಒದಗಿಸುವುದು) ಹಾಗಿದ್ದಲ್ಲಿ, ಸೇವಾ ಜೇಷ್ಠತಾ ಪಟ್ಟಿಯನುಸಾರ ಮುಂಬಡ್ತಿಯನ್ನು ನೀಡಲಾಗುತ್ತದೆಯೇ ; ಇಲ್ಲದಿದ್ದಲ್ಲಿ, ಕಾರಣ ತಿಳಿಸುವುದು ;

(ಇ) BMRCLನ ಸಿಬ್ಬಂದಿಗಳಿಗಾಗಿ ನಿರ್ಮಿಸಿರುವ ವಸತಿ ಗೃಹಗಳ ಹಂಚಿಕೆಯನ್ನು ಯಾವ ನಿಯಮಾವಳಿಗಳ ಅನ್ವಯ ನೀಡಲಾಗುತ್ತಿದೆ ; (ಪ್ರತಿ ಒದಗಿಸುವುದು)

(ಈ) ಇತ್ತೀಚೆಗೆ ಸರ್ಕಾರ ವಸತಿ ಗೃಹಗಳನ್ನು Twin Sharing Basisನಲ್ಲಿ ಸಿಬ್ಬಂದಿಗಳಿಗೆ ಹಂಚಲು ಆದೇಶ ಮಾಡಿದ್ದು ಇದರಿಂದ ಅಲ್ಲಿನ ಸಿಬ್ಬಂದಿಗಳಿಗೆ ತುಂಬಾ ಅನ್ಯಾಯವಾಗಿರುತ್ತದೆ. ಕಾರಣ Twin Sharing Basisನಲ್ಲಿ ಇಬ್ಬರು ಬೇರೆ ಬೇರೆ ಸಿಬ್ಬಂದಿ ಮಾತ್ರ ವಸತಿ ಗೃಹದಲ್ಲಿದ್ದು, ಅವರ ಪತ್ನಿ ಮತ್ತು ತಂದೆ–ತಾಯಿಗಳು ಬೇರೆ ಮನೆಯಲ್ಲಿ ವಾಸವಿರಬೇಕೆಂಬುದು ನಿಜವೇ ; ಇದರ ಬಗ್ಗೆ ಸ್ಪಷ್ಟೀಕರಣ ನೀಡುವುದು ;

(ಉ) BMRCLನ ಸಿಬ್ಬಂದಿಗಳಿಗಾಗಿ ನಿರ್ಮಿಸಿರುವ ವಸತಿ ಗೃಹಗಳ ಹಂಚಿಕೆಯನ್ನು ಜೇಷ್ಠತೆ ಆಧಾರದಲ್ಲಿ ಹಂಚಿಕೆ ಮಾಡಿದ್ದರೆ, ಸರ್ಕಾರ ಅಥವಾ ನಿಗಮಕ್ಕೆ ಆಗುತ್ತಿದ್ದ ತೊಂದರೆ ಏನು ;

(ಊ) ದೆಹಲಿ ಮೆಟ್ರೋ ನಿಗಮ ಮತ್ತು ಚೆನ್ನೈ ಮೆಟ್ರೋ ನಿಗಮಗಳಲ್ಲಿ ಅಲ್ಲಿನ ಸಿಬ್ಬಂದಿಗಳಿಗೆ ೩೫% ಭತ್ಯೆಗಳನ್ನು ನೀಡುತ್ತಿದ್ದು ನಮ್ಮ ಬೆಂಗಳೂರು ಮೆಟ್ರೋದಲ್ಲಿನ ನಿಗಮದಲ್ಲಿನ ಸಿಬ್ಬಂದಿಗಳಿಗೆ ಯಾತಕ್ಕಾಗಿ ನೀಡುತ್ತಿಲ್ಲ ?

## ತಿರುಪತಿ–ತಿರುಮಲ ಬೆಟ್ಟದಲ್ಲಿ ಸರ್ಕಾರಿ ಜಾಗ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೨ (೭೫) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಿರುಪತಿ–ತಿರುಮಲ ಬೆಟ್ಟದಲ್ಲಿ ಈ ಹಿಂದಿನಿಂದ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಜಾಗದ ವಿಸ್ತೀರ್ಣವೆಷ್ಟು ;

(ಆ) ಅದರಲ್ಲಿ ಈಗ ಎಷ್ಟು ಜಾಗವನ್ನು ಆಂಧ್ರ ಪ್ರದೇಶ ಸರ್ಕಾರ ತನ್ನ ವಶದಲ್ಲಿಟ್ಟುಕೊಂಡಿರುತ್ತದೆ ;

(ಇ) ಇತ್ತೀಚೆಗೆ ರಾಜ್ಯದಿಂದ ತಿರುಮಲ ಬೆಟ್ಟಕ್ಕೆ ಹೋಗುತ್ತಿರುವ ಭಕ್ತರ ಸಂಖ್ಯೆ ಅತ್ಯಧಿಕವಾಗಿದ್ದು, ಕರ್ನಾಟಕದ ಭಕ್ತರಿಗೆ ಮೂಲಭೂತ ಸೌಕರ್ಯಗಳ ಕೊರತೆ ಉಂಟಾಗಿರುವುದು ನಿಜವೇ ; ಇದ್ದಲ್ಲಿ, ಕೊರತೆಯನ್ನು ನೀಗಲು ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ವಿವರ ನೀಡುವುದು)

(ಈ) ಆಂಧ್ರಪ್ರದೇಶ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸೇರಿದ ಎಲ್ಲಾ ಜಮೀನನ್ನು ಬಿಡಿಸಿಕೊಳ್ಳಲು ಸರ್ಕಾರ ಈವರೆವಿಗೆ ಕೈಗೊಂಡಿರುವ ಕ್ರಮಗಳೇನು ? (ಪೂರ್ಣ ಮಾಹಿತಿ ಒದಗಿಸುವುದು)

## ‘‘ಬಿ’’ ನಗರವೆಂದು ಘೋಷಣೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೩ (೪೦೧) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾನಗರವನ್ನು ‘‘ಬಿ’’ ನಗರಗಳೆಂದು ಘೋಷಣೆ ಮಾಡಲು ಇರುವ ಮಾರ್ಗಸೂಚಿಗಳೇನು ; ಇದರಿಂದ ಮಹಾನಗರಕ್ಕೆ ಸಿಗುವ ಸೌಲಭ್ಯಗಳೇನು ; ಈ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಳ್ಳಬೇಕಾದ ಕ್ರಮಗಳೇನು ; (ಮಾಹಿತಿ ನೀಡುವುದು)

(ಆ) ೨೦೧೧ರ ಜನಗಣತಿಯ ಪ್ರಕಾರ ಕಲಬುರ್ಗಿ ಮಹಾನಗರದ ಜನಸಂಖ್ಯೆ ಎಷ್ಟು ;

(ಇ) ಕಳೆದ ಅಧಿವೇಶನದಲ್ಲಿ ದಿನಾಂಕ: ೦೮.೦೭.೨೦೧೮ರಂದು ಮಾನ್ಯ ಮುಖ್ಯಮಂತ್ರಿಗಳು ಕಲಬುರ್ಗಿ ನಗರವನ್ನು "ಬಿ" ನಗರವೆಂದು ಘೋಷಣೆ ಮಾಡುವುದಾಗಿ ಸದನದಲ್ಲಿ ಆಶ್ವಾಸನೆ ನೀಡಿದ್ದಾಗ್ಯೂ ಇಲ್ಲಿಯವರೆಗೆ ಕಲಬುರ್ಗಿ "ಬಿ" ನಗರವೆಂದು ಘೋಷಣೆ ಆಗದಿರಲು ಕಾರಣವೇನು ; (ವಿವರ ನೀಡುವುದು)

(ಈ) ಯಾವ ಕಾಲಮಿತಿಯೊಳಗೆ ಕಲಬುರ್ಗಿ ನಗರವನ್ನು "ಬಿ" ನಗರವೆಂದು ಘೋಷಣೆ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದು ?

## ಕುಡಿಯುವ ನೀರಿನ ಯೋಜನೆ

**ಶ್ರೀ ಎಸ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೪ (೩೯೧) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾನ್ವಿ ಪಟ್ಟಣದ ಜನತೆಗೆ ಕುಡಿಯುವ ನೀರಿನ ಸರಬರಾಜಿಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ;

(ಆ) ಇಲ್ಲಿಯವರೆವಿಗೆ ಯೋಜನೆಗೆ ಸರ್ಕಾರವು ಅನುಮತಿ ನೀಡಿದೆಯೇ ; ನೀಡದೇ ಇದ್ದಲ್ಲಿ ಈ ಯೋಜನೆ ಕಾರ್ಯಗತಗೊಳಿಸಲು ಸರ್ಕಾರವು ಯಾವಾಗ ಅನುಮತಿ ನೀಡುತ್ತದೆ ;

(ಇ) ಈ ಕುಡಿಯುವ ನೀರಿನ ಯೋಜನೆಗೆ ಅನುಮತಿಯನ್ನು ಯಾವ ಕಾರಣಕ್ಕಾಗಿ ತಡೆಹಿಡಿಯಲಾಗಿದೆ ; ಇದಕ್ಕೆ ಜವಾಬ್ದಾರರು ಯಾರು ;

(ಈ) ಪ್ರಸ್ತುತ ಈ ಯೋಜನೆಗಳ ಸ್ಥಿತಿಗತಿಗಳೇನು ?

## ಬಿ.ಬಿ.ಎಂ.ಪಿ. ನಿಯಂತ್ರಣದ ಮಾರುಕಟ್ಟೆಗಳ ನಿರ್ವಹಣೆ ಮತ್ತು ಆದಾಯ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೫ (೧೧೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಬಿ.ಬಿ.ಎಂ.ಪಿ. ನಿಯಂತ್ರಣಕ್ಕೆ ಒಳಪಟ್ಟ ಪಾಲಿಕೆ ಮಾರುಕಟ್ಟೆಗಳು ಎಷ್ಟು ; ಅವು ಯಾವ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ ; ಅವುಗಳ ವಿಸ್ತೀರ್ಣ, ವಾರ್ಷಿಕ ವಹಿವಾಟು ಕುರಿತಂತೆ ಮಾಹಿತಿ ಒದಗಿಸುವುದು ;

(ಆ) ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ಮಾರುಕಟ್ಟೆಗಳಿಂದ ಬಾಡಿಗೆ ಮತ್ತು ಇನ್ನಿತರ ಮೂಲಗಳಿಂದ ಸಂಗ್ರಹವಾದ ಹಣವೆಷ್ಟು ; ಪಾಲಿಕೆ ವತಿಯಿಂದ ಇವುಗಳ ಅಭಿವೃದ್ಧಿಗೆ ಖರ್ಚು ಮಾಡಿದ ಹಣವೆಷ್ಟು ; (ವರ್ಷಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಮಾರುಕಟ್ಟೆಗಳಲ್ಲಿ ನಿರ್ವಹಣೆ ಕೊರತೆಯಿಂದ ಬಿ.ಬಿ.ಎಂ.ಪಿ.ಯ ಆದಾಯಕ್ಕೂ ಕೊರತೆಯಾಗುವ ಜತೆಗೆ ಗ್ರಾಹಕರು ಮತ್ತು ರೈತರಿಗೆ ಅನಾನುಕೂಲವಾಗುತ್ತಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಸುಧಾರಣೆ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು ? (ಮಾಹಿತಿ ಒದಗಿಸುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 845 – ಪಿ5